'ಲೆಟ್ಸ್ ಜಸ್ಟ್ ಗೆಟ್ ಗೋಇಂಗ್...' ಅಂತಂದೆ. ಮಧುಕರಿ ಇನ್ನೂ ಮೀನಮೇಷ ಮಾಡಿದ. ಕೆಲಕಾಲವಿದ್ದು ಹೊರಡೋಣವೆಂದು ಪಟ್ಟು ಹಿಡಿದ. 'ನಾವು ಬಂದಿರೋದು ನನ್ನ ಫ್ರೆಂಡ್ ಮದುವೆಗೆ, ಮಧೂ... ಆಮೇಲಿಂದ ನಾನೇ ಏನಾದರೂ ಸಬೂಬು ಕೊಟ್ಟಿಕೋತೀನಿ... ಪ್ಲೀಸ್ ಹೊರಡು...' ಅಂತನ್ನುತ್ತ ನಾನೂ ಪಟ್ಟು ಹಿಡಿದೆ. 'ಒಂದು ಕೆಲಸ ಮಾಡೋಣವಾ? ಲೆಟ್ಸ್ ಜಸ್ಟ್ ಗೆಟ್ಟು ಅಲೇಕ್ಸ್ಯ, ವಿಷ್ ಹಿಮ್ ಅಂಡ್ ಗೋ...' ಅವನು ಹೇಳುವಾಗ, ಒಲ್ಲೆನಿಸಿಯೂ ಒಪ್ಪಿದೆ. 'ಎಲ್ಲಿ? ಕಣ್ಣೊರೆಸಿಕೋ... ಸುಮ್ಮನೆ ಎಲ್ಲರೆದುರು ಸೀನ್ ಆಗೋದು ಬೇಡ...' ಎಂದು ಹೇಳಿದವನು, ತಾನೇ ನನ್ನ ಕಣ್ಣು, ಕೆನ್ನೆ, ಗಲ್ಲವೊರೆಸಿ – ಮುಂಗೂದಲನ್ನು ಸರಿಗೈಯುತ್ತಿರುವ ಹೊತ್ತಿನಲ್ಲಿ, ಅಲೇಕ್ಸ್ಯ ಇದ್ದಕ್ಕಿದ್ದಂತೆ ತನ್ನ ನವವಧುವಿನೊಡನೆ, ನಾವಿಬ್ಬರಿದ್ದ ಬಾಲ್ಕನಿಯಲ್ಲಿ ಅವತರಿಸುವುದೆ?! ಬರುವಾಗ ಬಾಗಿಲು ಮುಂದಿಕ್ಕಿ ನಡೆದುಬಂದ!

'ದೇರ್ ಯು ಆರ್! ನಿನ್ನನ್ನೇ ನೋಡಿ ಹೋಗೋಣ ಅಂತಿದ್ದಿವಿ...' ಮಧುಕರಿ, ತೀರಾ ಅನೂಹ್ಯವಾಗಿ ಅಲೇಕ್ಸ್ಯನೆದುರಾಗಿ ಉಂಟಾದ ಆಘಾತದ ನಡುವೆಯೇ ಹೇಳಿದ. 'ಅರ್...ರೇ... ಏನಾಯಿತು? ಇಬ್ಬರೂ ಯಾಕೆ ಹೀಗಿದ್ದೀರಿ? ಅದೂ ಆಕಾಶಕ್ಕೆ ಆಯಕೊಟ್ಟುಕೊಂಡು?!' ಅಲೇಕ್ಸ್ಯನೇ ಮುತುವರ್ಜಿ ತಾಳಿ ವಿಷಯಕ್ಕಿಳಿದ. ಒಳಗಿನ ಪಡಸಾಲೆಯಲ್ಲಿನ ಗದ್ದಲ ಸಣ್ಣಗೆ ನಮ್ಮವರೆಗೂ ಕೇಳಿಸುತ್ತಿತ್ತು.

ನಾವೇನೂ ಉತ್ತರಿಸುವುದಕ್ಕೆ ಮೊದಲೇ, ಅಲೇಕ್ಸ್ಯ, 'ಅದಿರಲಿ... ಫಸ್ಟ್ಲೀ ಮೀಟ್ ಮೈ ಬ್ರೈಡ್ ಹವ್ವಾ... ಹವ್ವಾಗೂ ನನಗೂ ವರ್ಷದಿಂದೀಚೆಗಿನ ಪರಿಚಯ.... ವಿ ಕೋರ್ಟೆಡ್ ಇಂಟೆನ್ಸ್ಲೀ ಫಾರ್ ಸಿಕ್ಸ್ ಮಂತ್ಸ್... ಈಗ ಮದುವೆ.... ಆಶ್ಚರ್ಯ ಆಗುತ್ತಲ್ಲವಾ? ನಿಮಗಿರಲಿ, ನನಗೂ ಅಜೀಬನಿಸುತ್ತೆ. ಓಹ್ ಗ್ಯಾಡ್! ಕಡೆಗೂ ನಾನು ಮದುವೆಯಾದೆ!! ಐ ಕಾಂಟ್ ಬಿಲೀವ್ ದಿಸ್ ಮೈ ಸೆಲ್ಫ್!!!' ಎಂದೆಲ್ಲ ಬಲು ಖುಷಿಯಿಂದಲೂ, ಅಷ್ಟೇ ಧಿಮಾಕಿನಿಂದಲೂ ಹೇಳಿದ. ನನಗಾದರೂ ಒತ್ತಾಯದಿಂದ ನಗುವುದಾಯಿತು. ಅವನಿಂತು ಬೀಗುತ್ತಿರುವ ನಡುವೆಯೇ ಚಂದನೆ ಮೋರೆಯುಳ್ಳ ಹವ್ವಾ, ನಕ್ಕು ಖುಷಿ ಹೆಚ್ಚಿಸಿಕೊಂಡು ಕೈಕುಲುಕಿದಳು. 'ಹಾಗೇ, ಹವ್ವಾ... ಮೀಟ್ ಸುಮೋದ್... ಸುಮೋದಿನಿ ಅಂತ... ನನ್ನ ಬಲು ಹಳೆಯ ಗೆಳತಿ ಮತ್ತು ನನ್ನಿಡೀ ಬದುಕಿನಲ್ಲಿರುವ ಒಬ್ಬಳೇ ಒಬ್ಬ ಸಲಹೆಗಾರ್ತಿ... ಅಂಡ್ ದಿಸೀಸ್ ಮಧುಕರಿ ಸರ್... ಸುಮೋದ್ಸ್ ಬೆಟರ್ ಹಾಫ್....' ಎಂದು ನಮ್ಮನ್ನೂ ಪರಿಚಯಿಸುವಾಗ, ಹವ್ವಾ, ಮಧುಕರಿಯ ಕೈಕುಲುಕಿ ನಕ್ಕಳು. ಅವಳು ನಕ್ಕಷ್ಟೂ ಮೋರೆಯ ಲಕ್ಷಣ ಹೆಚ್ಚುವುದೆಂದು ನನ್ನದೇ ಸ್ವಸಂದಿಗ್ಧದ ನಡುವೆಯೂ ಅನ್ನಿಸಿತು!

'ವಿಶ್ಯು ಬೋತ್ ಅ ವೆರಿ ಹ್ಯಾಪಿ ಮ್ಯಾರೀಡ್ ಲೈಫ್...' ಎಂದು ಮಧುಕರಿ ಬಾಯಿತುಂಬಿ ಹರಸಿದ. ನಾನೂ ಮಾತು ಜೋಡಿಸಿಕೊಂಡು ಅದನ್ನೇ ಹೇಳಿದೆ. ತಡವರಿಸಿಕೊಂಡೇ ಶುಭಶಕುನವಾಡಿದೆ. 'ಸ್ಸ್... ಸ್ಸಾರೀ ಕಣಯ್ಯಾ... ನಮಗೆ ಈ ಸಂದರ್ಭ ಅಂತ ನಿಜಕ್ಕೂ ಗೊತ್ತಿರಲಿಲ್ಲ... ಏನೂ ಉಡುಗೊರೆ ತರಲಾಗಲಿಲ್ಲ...' – ಮಧುಕರಿ ಪರಿತಪಿಸುವಾಗ, 'ನಿಮ್ಮಿಬ್ಬರಿಗೂ ಸರ್ಪ್ರೈಸ್ ಕೊಡೋದೇ ಉದ್ದೇಶವಾಗಿತ್ತು... ಅಂಡ್ ಐ ಡಿಡ್! ನಿಮ್ಮಿಬ್ಬರನ್ನೂ ಆವಾಗಲೇ ಗಮನಿಸಿದೆ... ಎಷ್ಟು ಹೊತ್ತು ನಿಮ್ಮ ಏರಿದ ಹುಬ್ಬು ಕೆಳಗಿಳೀಲಿಲ್ಲ, ಅಲ್ಲವಾ?' ಅಂತಂದು, ಅಲೇಕ್ಸ್ಯ ಮತ್ತೊಮ್ಮೆ ನಗು ಮುಂದುವರೆಸಿದ.

ನಾವಿನ್ನೂ ಮುಂದಿನ ಮಾತಿನಲ್ಲಿ ತೊಡಗಿರಲಿಲ್ಲ, ಬಾಲ್ಕನಿಯ ಕದ ಅನಾಮತ್ತು ತೆರೆದುಕೊಂಡಿತು. ಹಿಂದೆಯೇ ಒಂದು ಚಂದದ ಹೆಣ್ಮೋರೆಯಿಣಿಕಿ ತೋರಿತು! ಬಂದಾಕೆ